ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,

ದೇವದುರ್ಗ.

**CC No.644/2023**

**CW-1 PW-3**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಸುಜಾತ |
| ಗಂಡ | ಃ | ದಶವಂತ |
| ವಯಸ್ಸು | ಃ | 33 |
| ಉದ್ಯೋಗ | ಃ | ಪಿ ಎಸ್ ಐ |
| ವಾಸಸ್ಥಳ | ಃ | ತುರ್ವಿಹಾಳ |
| ಪ್ರಮಾಣಿಕರಿಸಿದ ದಿನಾಂಕ | ಃ | **22-08-2025** |

<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.</u>

ನಾನು ದಿನಾಂಕ 12.08.2022 ರಿಂದ ದಿನಾಂಕ 24.06.2024 ವರೆಗೆ ಜಾಲಹಳ್ಳಿ ಠಾಣೆಯಲ್ಲಿ ಪಿ ಎಸ್ ಐ ಎಂದು ಕೆಲಸ ಮಾಡಿರುತ್ತೇನೆ.

ದಿನಾಂಕ **24-06-2023** ರಂದು ಬೆಳಿಗ್ಗೆ **11.00** ಗಂಟೆಗೆ ಶಾವಂತಗಲ್ ಗ್ರಾಮದ ಮಾರುತಿ ತಂದೆ ಶರಣಪ್ಪ ಮುಂಡರಗಿ ಇವರು ತಮ್ಮ ಅಂಗಡಿ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಪರವಾನಿಗೆ ಇಲ್ಲದೇ ಅಕ್ರಮ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಾತ್ಮಿ ಮೇರೆಗೆ ಮೇಲಾಧಿಕಾರಿಗಳ ಮಾರ್ಗದರ್ಶನದಲ್ಲಿ ತಕ್ಷಣ ಪಂಚರನ್ನು ಬರ ಮಾಡಿಕೊಂಡು ಸಿಬ್ಬಂದಿ ಜೊತೆ ಮಧ್ಯಾಹ್ನ **12.35** ಗಂಟೆಗೆ ಸ್ಥಳಕ್ಕೆ ಹೋಗಿ ನೋಡಲಾಗಿ ಮಾರುತಿ ತಂದೆ ಶರಣಪ್ಪ ತನ್ನ ಡಬ್ಬಿ ಅಂಗಡಿ ಮಂದೆ ಸಾರ್ವಜನಿಕ ಸ್ಥಳದಲ್ಲಿ ಮಧ್ಯ ಮಾರಾಟ ಮಾಡುತ್ತಿದ್ದು ಜನರು ಖರೀದಿ ಮಾಡುತ್ತಿದ್ದರು, ದಾಳಿ ಮಾಡಿದ್ದು ಖರೀದಿಸಲು ಬಂದಿದ್ದ ಜನ ಓಡಿ ಹೋಗಿದ್ದು ಮಾರಾಟ ಮಾಡುತ್ತಿದ್ದ ವ್ಯಕ್ತಿ ಸಿಕ್ಕಿ ಬಿದ್ದಿದ್ದು ಆತನನ್ನು ವಿಚಾರಿಸಿದಾಗ ಮಾರುತಿ ತಂದೆ ಶರಣಪ್ಪ ಮುಂಡರಗಿ ಎಂದು ತಿಳಿದು ಬಂದಿದ್ದು ಆತನ ಬಳಿ **90** ಎಂ.ಎಲ್ ಓ.ಸಿ ಮಧ್ಯದ **36** ಪೌಚುಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಸದರಿ ಮಧ್ಯವನ್ನು ರಾಸಾಯನಿಕ ಪರೀಕ್ಷೆ ಕುರಿತು ಸೀಲ್ ಮಾಡಿ ಎಸ್.ಕೆ ಎಂಬ ಮೋಹರನ್ನು ಹಾಕಿರುತ್ತೇವೆ. ನಾನು ಮತ್ತು ಪಂಚರು ಸಹಿ ಮಾಡಿದ ಚೀಟಿ ಅಂಟಸಿರುತ್ತೇವೆ. ಆರೋಪಿತನ ಹೆಸರು ಮತ್ತು ವಿಸಾಳ ಕುರಿತು ಚಾಸಾ-**7** ರವರನ್ನು ಸ್ಥಳದಲ್ಲಿ ವಿಚಾರಿಸಲಾಗಿ ಆರೋಪಿ ಹೇಳಿದ ಹೆಸರು ಮತ್ತು ವಿಳಾಸ ಸರಿಯಾಗಿ ಹೇಳಿದ್ದನ್ನು ಖಚಿತಪಡಿಸಿಕೊಂಡಿರುತ್ತೇನೆ. ಮುಮಾಗಳನ್ನು ಮತ್ತು ಪಂಚನಾಮೆ

ಹಾಗೂ ಆರೋಪಿಯನ್ನು ಠಾಣೆಗೆ ಕರೆ ತಂದು ಮುದಿನ ಕ್ರಮ ಕುರಿತು ಚಾಸಾ-**10** ರವರಿಗೆ ಕ್ರಮ ಕೈಗೊಳ್ಳುವಂತೆ ಜ್ಞಾಪನವನ್ನು ನೀಡಿರುತ್ತೇನೆ. ಪಂಚನಾಮೆಯನ್ನು ಮಧ್ಯಾಹ್ನ **12.35** ರಿಂದ **01.15** ಗಂಟೆ ವರೆಗೆ ಮಾಡಿರುತ್ತೇವೆ.

ನಿಪಿ-**1** ಮೇಲೆ ಇದ್ದ ಸಾಕ್ಷಿ ಸಹಿಯನ್ನು ನಿಪಿ-**1** ಸಿ ಎಂದು, ಜ್ಞಾಪನ ಪತ್ರವನ್ನು ನಿಪಿ-**2** ಎಂದು ಸಹಿಯನ್ನು ನಿಪಿ-**2** ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ **36** ಖಾಲಿ ಪೌಚುಗಳನ್ನು ಒಟ್ಟಾಗಿ ಮುಮಾ-**1** ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SMP** ವಕೀಲರಿಂದ.</u>

ದಿನಾಂಕ 12.08.2022 ರಿಂದ ದಿನಾಂಕ 24.06.2024 ವರೆಗೆ ಪಿಎಸ್.ಐ ಜಾಲಹಳ್ಳಿ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ಬಾತ್ಮಿ ಬಂದಾಗ ನಾನು ಠಾಣೆಯಲ್ಲಿ ಇದ್ದೆ. ಜಾಲಹಳ್ಳಿಯಿಂದ ಶಾವಂತಗಲ್ ಗ್ರಾಮ ಅಂದಾಜು 30 ಕಿ.ಮೀ ಅಂತರ ಇರುತ್ತದೆ. ಜಾಲಹಳ್ಳಿಯಿಂದ ಶಾವಂತಗಲ್ ಗ್ರಾಮಕ್ಕೆ ಹೋಗಲು 1 ವರೆ ತಾಸು ಬೇಕಾಗುತ್ತದೆ ಎಂದರೆ ಸರಿಯಲ್ಲ ಸಾಕ್ಷಿ 30 ನಿಮೀಷ ಬೇಕಾಗುತ್ತದೆ ಎಂದು ನುಡಿಯುತ್ತಾರೆ. ದಾಳಿಗೆ ನಾನು ಚಾಸಾ-4 ಮತ್ತು 5 ಹಾಗೂ ಇಬ್ಬರು ಪಂಚರು ಹೋಗಿರುತ್ತೇವೆ. ಪಂಚರನ್ನು ಚಾಸಾ-6 ರವರು ಕರೆದುಕೊಂಡು ಬಂದಿರುತ್ತಾರೆ. ಪಂಚರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಪಂಚರು ಜಾಲಹಳ್ಳಿ ಗ್ರಾಮದವರು ಆಗಿರುತ್ತಾರೆ. ಆರೋಪಿ ಡಬ್ಬಿ ಅಂಗಡಿ ಮುಂದಿನ ಸಾರ್ವಜನಿಕ ಸ್ಥಳದಲ್ಲಿ ಮಾರಾಟ ಮಾಡುತ್ತಿದ್ದ. ಸದರಿ ಡಬ್ಬಿ ಅಂಗಡಿ ಆರೋಪಿಗೆ ಸೇರಿದ್ದು ಇರುತ್ತದೆ. ಅಂಗಡಿ ಸುತ್ತ ಮುತ್ತ ಮನೆಗಳು ಇವೆ ಎಂದರೆ ಸರಿ. ಸದರಿ ಮನೆಯವರನ್ನು ವಿಚಾರಣೆ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯ ರಂಗನಾಥ ಇವರನ್ನು ಹೊರತು ಪಡಿಸಿ ಬೇರೆಯಾರು ಮುಂದೆ ಬಂದಿರುವುದಿಲ್ಲ ರಂಗನಾಥ ಇವರನ್ನು ವಿಚಾರಣೆ ಮಾಡಿರುತ್ತೇನೆ. ದಾಳಿ ಪ್ರಕ್ರಿಯೇ ಅಂದಾಜು 1 ತಾಸು ಆಗಿರುತ್ತದೆ. ಠಾಣೆಗೆ ಬಂದಾಗ 02.30 ಗಂಟೆ ಆಗಿತ್ತು. ಜಪ್ತಿ ಮಾಡಿಕೊಂಡಂತಹ ಮಧ್ಯ ಪರವಾನಿಗೆ ಪಡೆದ ಮಧ್ಯದ ಅಂಗಡಿಗಳಲ್ಲಿ ಸಿಗುತ್ತವೆ ಎಂದರೆ ಸರಿ. ನಾನು ಯಾವುದೇ ದಾಳಿ ಮಾಡದೇ ಇರುವುದರಿಂದ ಸ್ಥಳಿಕರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಠಾಣ ಅಂಕಿ ಸಂಖ್ಯೆಗಳ ಸಲುವಾಗಿ ಆರೋಪಿ ವಿರುದ್ದ ಸುಳ್ಳು

ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.  ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.